ಸಾಕ್ಷಿಯನ್ನು ದಿನಾಂಕ 18.12.2024 ರಂದು ಕರೆಸಿ ಪ್ರಮಾಣೀಕರಿಸಲಾಯ್ತು.

**ಪಾಟೀಸವಾಲುಃ ಆರೋಪಿ ಪರ ಶ್ರೀ.S.R.R. ವಕೀಲರಿಂದ :**

1) ಹಳೇಊರಮ್ಮ ದೇವರನ್ನು ಕರೆದುಕೊಂಡು ಹೋಗಿದ್ದೆ. ಆ ದೇವಸ್ಥಾನ ಮುಜರಾಯಿ ಇಲಾಖೆಗೆ ಒಳಪಡುತ್ತದೆ. ಮುಜಾರಾಯಿ ಇಲಾಖೆಗೆ ಒಳಪಟ್ಟ ದೇವಸ್ಥಾನಗಳಿಗೆ ಯಾರು ಯಾರು ಯಾವ ಯಾವ ಕೆಲಸ ಮಾಡಬೇಕೆಂಬ ಪ್ರತ್ಯೇಕವಾದ ನಿಯಮಗಳು ಇರುತ್ತವೆ ಎಂದರೆ ಸರಿ. ಆ ಪಟ್ಟಿಯಲ್ಲಿ ನನ್ನ ಹೆಸರು ಇರುವುದಿಲ್ಲ. ಸರ್ಕಾರದಿಂದ ನೇಮಿಸಿರುವ ವ್ಯಕ್ತಿಗಳನ್ನುಹೊರತುಪಡಿಸಿ ಬೇರೆಯವರು ದೇವಸ್ಥಾನದ ಕೆಲಸಗಳನ್ನು ಮಾಡುವ ಹಾಗಿಲ್ಲ ಎಂದರೆ ಸಾಕ್ಷಿಯು ತೋಟಿಯವರು ಕರೆದಿದ್ದರಿಂದ ಕೂಲಿ ಕೆಲಸಕ್ಕೆ ಹೋಗಿದ್ದೆ ಎಂದು ನುಡಿಯುತ್ತಾರೆ. ಈ ವಿಚಾರವನ್ನು ದೂರಿನಲ್ಲಿ ಬರೆದಿರುವುದಿಲ್ಲ.

2) ನಾನು 9 ನೇ ತರಗತಿಯವರೆಗೆ ವ್ಯಾಸಂಗ ಮಾಡಿಕೊಂಡಿರುತ್ತೇನೆ. ನನಗೆ ಕನ್ನಡ ಭಾಷೆ ಓದಲು ಬರುತ್ತದೆ. ದೂರನ್ನು ಚಂದ್ರಶೇಖರ್ ರವರು ಬರೆದಿರುತ್ತಾರೆ. ಅವರು ಬರೆದಿರುವ ದೂರಿಗೆ ನಾನು ಕೇವಲ ಸಹಿಯನ್ನು ಮಾತ್ರ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದೂರಿನಲ್ಲಿ ಯಾವ ಸ್ಥಳದಲ್ಲಿ ಮತ್ತು ಯಾವ ದಿನಾಂಕದಂದು ಘಟನೆಯಾಗಿರುತ್ತದೆಂದು ಹೇಳಿ ಬರೆಸಿರುತ್ತೇನೆ. ಅವಾಚ್ಯ ಶಬ್ದ ಎಂದರೆ ಏನು ಎಂದು ನನಗೆ ಗೊತ್ತಿಲ್ಲ. ನಿಂದನೆ ಎಂದರೆ ಏನು ಎಂದು ನನಗೆ ಗೊತ್ತಿಲ್ಲ.ವೈದ್ಯರ ಹತ್ತಿರ ಹೋದಾಗ ಸಂಜೆ 5 ಗಂಟೆ ಆಗಿತ್ತು. ಘಟನಾ ಸ್ಥಳಕ್ಕೂ ಮತ್ತು ಆಸ್ಪತ್ರೆಗೆ ಸುಮಾರು ಎರಡು-ಮೂರು ಕಿ.ಮೀ. ದೂರ ಇರುತ್ತದೆ. ಪೊಲೀಸರಿಗೆ ಮಾಹಿತಿಯನ್ನು ನೀಡುವಂತೆ ನಾನು ವೈದ್ಯರಿಗೆ ತಿಳಿಸಿರುವುದಿಲ್ಲ. ಆಸ್ಪತ್ರೆಯಲ್ಲಿ ನಾನು ಹೊರರೋಗಿಯಾಗಿ ಚಿಕಿತ್ಸೆ ಪಡೆದುಕೊಂಡು ಬಂದಿರುತ್ತೇನೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೂಂಡ ನಂತರ ಕೂಡಲೇ ಆಸ್ಪತ್ರೆಯ ಪಕ್ಕದಲ್ಲೇ ಇರುವ ಪೋ.ಠಾಣೆಗೆ ಹೋಗಿ ದೂರು ನೀಡಲು ಪ್ರಯತ್ನಿಸಿರುವುದಿಲ್ಲ.

3) ಈ ಘಟನೆಯಾಗುವುದಕ್ಕಿಂತ ಒಂದು ವರ್ಷದ ಹಿಂದೆ ನಮ್ಮ ಗ್ರಾಮದ ವೆಂಕಟೇಶ್ ರವರ ಮಗ ಕುಮಾರ್ ರವರ ಮೇಲೆ ಇದೇ ರೀತಿ ದೂರನ್ನು ಕೊಟ್ಟಿದ್ದೆ ಎಂದರೆ ಸರಿ. ಅವರಿಗೆ ಹಣ ನೀಡಿದರೆ ದೂರನ್ನು ವಾಪಸ್ ತೆಗೆದುಕೊಳ್ಳುತ್ತೇನೆ, ಇಲ್ಲದಿದ್ದರೆ ಪ್ರಕರಣವನ್ನು ಮುಂದುವರೆಸುತ್ತೇನೆ ಎಂದು ಧಮಕಿ ಹಾಕಿದ್ದೆ ಎಂದರೆ ಸರಿಯಲ್ಲ. ನಂತರ ಅವರಿಂದ ಹಣ ಪಡೆದುಕೊಂಡು ನಾನು ದೂರನ್ನು ವಾಪಸ್ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಚಾಸಾ.2 ಮತ್ತು 3 ರವರು ಹಾಗೂ ನಾನು ಶಾಮಿಲಾಗಿ ಸುಳ್ಳು ದೂರುಗಳನ್ನು ಕೊಟ್ಟು ನಂತರ ಆರೋಪಿಗಳಿಂದ ಹಣ ಪಡೆದು ದೂರನ್ನು ವಾಪಸ್ ಪಡೆದುಕೊಳ್ಳುತ್ತೇನೆ ಎಂದರೆ ಸರಿಯಲ್ಲ.

4) ನಿಪಿ.1 ರ 2 ನೇ ಪುಟದಲ್ಲಿ ದಿನಾಂಕವನ್ನು ಬರೆದು ಪುನಃ ತಿದ್ದಿ ಬರೆಯಲಾಗಿದೆ ಎಂದರೆ ಸರಿ. ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡ 3 ದಿನಗಳ ನಂತರ ದೂರನುನ ನೀಡಿರುತ್ತೇನೆ. ಘಟನೆಯಾದ ದಿನದಂದೇ ಅಥವಾ ಮಾರನೇ ದಿನ ಹಾಗೂ ನಂತರದ ದಿನದಲ್ಲಿ ದೂರನ್ನು ಕೊಡಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಹಿರಿಯರನ್ನು ಕೇಳಿ ಕೊಡೋಣ ಎಂದು ಇದ್ದೆ ಎಂದು ನುಡಿಯುತ್ತಾರೆ. ಸದರಿ ಹಿರಿಯರ ಹೆಸರನ್ನು ನಾನು ದೂರಿನಲ್ಲಿ ಬರೆದಿರುವುದಿಲ್ಲ.

5) ದೂರನ್ನು ಕೊಟ್ಟ ದಿನದಂದು ಪೊಲೀಸರು ಸ್ದಳಕ್ಕೆ ಬಂದಿರುತ್ತಾರೆ. ಅಂದು ನನ್ನನ್ನು ವಿಚಾರಣೆ ಮಾಡಿ ಹೇಳಿಕೆಯನ್ನು ತೆಗೆದುಕೊಂಡಿರುವುದಿಲ್ಲ. ದಿಃ 17.08.2018 ರಂದು ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಘಟನಾ ಸ್ದಳದಲ್ಲಿ ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ನಾನು ದೂರು ಕೊಟ್ಟ ದಿನದಂದು ಪೊಲೀಸರು ಸ್ದಳಕ್ಕೆ ಕರೆದುಕೊಂಡು ಹೋಗಿರಲಿಲ್ಲ. ನನ್ನ ಮರುಹೇಳಿಕೆಯಲ್ಲಿ ಘಟನೆಯಾದ ದಿನಾಂಕ, ಸಮಯ ಮತ್ತು ಸ್ದಳವನ್ನು ಹೇಳಿರುತ್ತೇನೆ. ಪೊಲೀಸರು ಸ್ದಳಕ್ಕೆ ಬಂದಾಗ ಸುಮಾರು 3 ಜನ ಇದ್ದರು. ಅವರ ಹೆಸರು ಮಂಜುನಾಥ, ಪ್ರದೀಪ ಮತ್ತು ವೆಂಕಟೇಶ. ಅವರನ್ನು ಪೊಲೀಸರು ಕರೆದುಕೊಂಡು ಬಂದಿದ್ದರು.

ಅವರು ಹಳೇಊರಿನವರು. ಅವರನ್ನು ಕರೆದುಕೊಂಡು ಬರುವುದಕ್ಕಿಂತ ಮುಂಚೆ ಪೊಲೀಸರು ನೋಟೀಸನ್ನು ಕೊಡಬೇಕು ಎಂದರೆ ಗೊತ್ತಿಲ್ಲ.

6) ಟೆಂಪೋ ವಾಹನವನ್ನು ಪೋ.ಠಾಣೆಯ ಆವರಣದಲ್ಲಿ ವಶಕ್ಕೆ ತೆಗೆದುಕೊಂಡಿರುತ್ತಾರೆ. ಪೊಲೀಸರು ಸ್ಥಳಕ್ಕೆ ಬಂದಾಗ ಮಧ್ಯಾಹ್ನ 1 ರಿಂದ 2 ಗಂಟೆ ಸಮಯ ಆಗಿತ್ತು. ಟೆಂಪೋ ವಾಹನವನ್ನು ದಿಃ 18.08.2018 ರಂದು ವಶಕ್ಕೆ ತೆಗೆದುಕೊಂಡಿರುತ್ತಾರೆ. ಆ ಮಹಜರ್ ಗೆ ನಾನು ಪೋ.ಠಾಣೆಯ ಮುಂದೆ ಸಹಿ ಮಾಡಿರುತ್ತೇನೆ. ಆಗ ಸುಮಾರು ಎಷ್ಟು ಜನ ಇದ್ದರು ಎಂದು ಗೊತ್ತಿಲ್ಲ. ಸದರಿ ಮಹಜರ್ ಗೆ ನಾನು ಮತ್ತು ಮಂಜುನಾಥ ಸಹಿಗಳನ್ನು ಮಾಡಿರುತ್ತೇವೆ. ಮಂಜುನಾಥರವರನ್ನು ನಾನೇ ಕರೆದುಕೊಂಡು ಹೋಗಿದ್ದೆ. ದೂರನ್ನು ಕೊಡಲು ಹೋದಾಗ ಪೊಲೀಸರು ಹಾಳೆಗಳ ಮೇಲೆ ನಿಮ್ಮ ಸಹಿಗಳನ್ನು ಪಡೆದುಕೊಂಡಿರುತ್ತಾರೆಯೇ ಎಂದರೆ ಸಾಕ್ಷಿಯು ದೂರನ್ನು ಕೊಟ್ಟಾಗ ಸಹಿಗಳನ್ನು ಪಡೆದುಕೊಂಡಿರುತ್ತಾರೆಂದು ನುಡಿಯುತ್ತಾರೆ.

7) ನಿಪಿ.4 ನ್ನು ಪಂಚನಾಮೆ ಕಾಲದಲ್ಲಿ ತೆಗೆದುಕೊಂಡಿರುತ್ತಾರೆ. ನಿಪಿ.4 ರಲ್ಲಿ ಕಾಣುವುದು ರಸ್ತೆ ಎಂದರೆ ಸರಿ. ಆಗ ರಸ್ತೆಯ ಅಕ್ಕಪಕ್ಕದಲ್ಲಿ ಮನೆಗಳು ಇರುವುದಿಲ್ಲ ಎಂದರೆ ಸರಿ. ನಿಪಿ.4 ರಲ್ಲಿ ರಾಜಾಪುರ ಗೇಟ್ ಕಾಣುವುದಿಲ್ಲ ಎಂದರೆ ಸಾಕ್ಷಿಯು ಅದು ಅರಣ್ಯವಾಗಿದ್ದು ಅಲ್ಲಿ ಜಾಸ್ತಿ ಜನ ಓಡಾಡುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ.4 ರಿಂದ 7 ನ್ನು ಪೊಲೀಸರೊಂದಿಗೆ ಶಾಮೀಲಾಗಿ ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಪೊಲೀಸರೂ ಸಹ ಸದರಿ ಭಾವಚಿತ್ರಗಳನ್ನು ಅವರ ಅಂಕಿ ಅಂಶಗಳನ್ನು ಭರ್ತಿ ಮಾಡಿಕೊಳ್ಳಲು ಸೃಷ್ಟಿ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನಾನು ದೂರುಗಳನ್ನು ಸಲ್ಲಿಸಿ ಸರ್ಕಾರದಿಂದ ಮತ್ತು ಆರೋಪಿಗಳಿಂದ ಹಣ ಪಡೆದುಕೊಳ್ಳುವ ಅಭ್ಯಾಸ ಹೊಂದಿರುತ್ತೇನೆ ಎಂದರೆ ಸರಿಯಲ್ಲ. ಘಟನೆ ಆಗಿದೆ ಎಂದು ಹೇಳಲಾದ ದಿನ ನಾನು ಪೋ.ಠಾಣೆಗೆ ಹೋಗಿರುವುದಿಲ್ಲ ಮತ್ತು ಪೊಲೀಸರೂ ಸಹ ನನ್ನ ಹತ್ತಿರ ಬಂದಿರುವುದಿಲ್ಲ ಎಂದರೆ ಸರಿ. ನನ್ನ ಮತ್ತು ಆರೋಪಿಗಳ ನಡುವೆ ದೇವಸ್ಥಾನದ

ವಿಚಾರದಲ್ಲಿ ಮನಸ್ತಾಪ ಇರುತ್ತದೆ ಎಂದರೆ ಸರಿಯಲ್ಲ. ಆದ್ದರಿಂದ ಆರೋಪಿಗಳನ್ನು ಕಂಡರೆ ಮೊದಲಿನಿಂದಲೂ ಆಗುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸರು ನಾನು ಬೆಂಗಳೂರಿಗೆ ದೇವರನ್ನು ಕರೆದುಕೊಂಡು ಹೋಗಿದ್ದ ಮನೆಗೆ ಹೋಗಿ ಅವರ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆಯೇ ಎಂದರೆ ಗೊತ್ತಿಲ್ಲ. ರಾಜಾಪುರ ಗೇಟ್ ಬಳಿ ಬಂದಾಗ 1 ನೇ ಆರೋಪಿಯು ಬಂದು ಎದ್ದೇಳು ಹೊಲೆ ಬೋಳೀ ಮಗನೇ ಎಂದು ಬೈದು ಮುಖಕ್ಕೆ ಹೊಡೆದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ನನ್ನ ಹಣೆಯನ್ನು ಟ್ರಾಕ್ಟರ್ ನ ಭಾಗಕ್ಕೆ ಗುದ್ದಿಸಿದಾಗ ನನ್ನ ಎಡಕಣ್ಣಿನ ಹತ್ತಿರ ಪೆಟ್ಟಾಯಿತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಆರೋಪಿ ನನಗೆ ಜಾತಿ ನಿಂದನೆ ಮಾಡಿಲ್ಲ ಎಂದರೆ ಸರಿಯಲ್ಲ. ರಘು ಮತ್ತು ಪ್ರತಾಪ್ ರವರು ಜಗಳವನ್ನು ಬಿಡಿಸಿಕೊಂಡಿರುತ್ತಾರೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

8) ನಾನು, ಚಾಸಾ.2 ಮತ್ತು 3 ರವರು ಸೇರಿಕೊಂಡು ಸುಳ್ಳು ಗಾ.ಪ್ರ.ಪತ್ರವನ್ನು ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಊರಿನಲ್ಲಿ ಯಾವುದೇ ಪಂಚಾಯತಿದಾರರಿಗೆ ತಿಳಿಸಿರುವುದಿಲ್ಲ ಮತ್ತು ಯಾವುದೇ ಪಂಚಾಯತಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಸ್ಥಳಕ್ಕೆ ಬಂದು ಮಹಜರ್ ಮಾಡಿಕೊಂಡು ಸ್ಥಳದಲ್ಲಿ ಭಾವಚಿತ್ರಗಳನ್ನು ಪಡೆದುಕೊಂಡಿರುತ್ತಾರೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಗೆ ತೊಂದರೆ ನೀಡಲು ಸುಳ್ಳು ದೂರನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು, ಚಾಸಾ.2 ಮತ್ತು 3 ರವರು ಒಂದೇ ಕಡೆ ತಮಟೆ ಭಾರಿಸುವ ಕೆಲಸ ಮಾಡುತ್ತಾರೆ. ಅವರು ನಮ್ಮ ಸಂಬಂಧಿಕರಲ್ಲ, ಅವರು ನಮ್ಮ ಜನಾಂಗದವರು ಮತ್ತು ನಮ್ಮ ಗ್ರಾಮದವರು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ತುಮಕೂರು.

ಸಾಕ್ಷಿಯ ಸಹಿ